ಪತ್ರಿಕಾ ತುಣುಕುಗಳು
PAPER CLIPPINGS

131

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 04/03/2020

## ಸ್ಪೀಕರ್ ವಿರುದ್ಧ ಪ್ರತಿಪಕ್ಷ ವಾಗ್ದಾಳಿ | ಏಕಾಂಗಿಯಾಗಿ ಗಂಟೆಗಟ್ಟಲೆ ಕುಳಿತುಕೊಂಡ ಸಿಎಂ

# ನಾಲ್ಕು ಬಾರಿ ಸಂಧಾನ ಸಭೆ ನಡೆಸಿದರೂ ವಿಫಲ

4/3/20

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೊರೆಸ್ವಾಮಿ ವಿರುದ್ಧ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ಆರಂಭವಾದ ಪ್ರತಿಪಕ್ಷಗಳ ಪ್ರತಿಭಟನೆಗೆ ಬ್ರೇಕ್ ಹಾಕಲು ಸಾಲು ಸಾಲು ಸಂಧಾನ ಸಭೆ ನಡೆಸಿದರೂ ಪ್ರಯೋಜನವಾಗಲಿಲ್ಲ. ಇಡೀ ದಿನ ಕಾಂಗ್ರೆಸ್ ಶಾಸಕರು ವಿಧಾನಸಭೆಯ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಮಂಗಳವಾರ ಬೆ.11ಗಂಟೆಗೆ ವಿಧಾನಸಭೆ ಆರಂಭವಾಗಬೇಕಿತ್ತು. ಆದರೆ ಯತ್ನಾಳ್ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಲೇಬೇಕು ಎನ್ನುವ ಹಠಕ್ಕೆ ಪ್ರತಿಪಕ್ಷ ಹಾಗೂ ಚರ್ಚೆಗೆ ಅವಕಾಶ ನೀಡುವುದಿಲ್ಲವೆಂದು ಆಡಳಿತ ಪಕ್ಷ ಬಿಗಿಪಟ್ಟು ಹಿಡಿದಿದ್ದರಿಂದ ಸಂಧಾನ ಸಭೆ ಯಶ ಕಾಣದೇ, ಸದನ ಕಾರ್ಯಕಲಾಪ ಮೂರು ಗಂಟೆ ತಡವಾಗಿ ಆರಂಭವಾಯಿತು.

ಸದನ ಆರಂಭಕ್ಕೂ ಮೊದಲು ಸ್ಪೀಕರ್ ಕಾಗೇರಿ ಅವರನ್ನು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನೇತೃತ್ವದ ನಿಯೋಗ ಭೇಟಿಯಾಗಿ ನಿಯಮ 363ರಲ್ಲಿ ಚರ್ಚೆಗೆ ಅವಕಾಶ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಒಪ್ಪಿಗೆ ನೀಡಿದ ಸ್ಪೀಕರ್, ಮಧ್ಯಾಹ್ನದ ಬಳಿಕ ಸಂವಿಧಾನದ ವಿಶೇಷ ಚರ್ಚೆ ಆರಂಭಿಸಲು ನಿರ್ಧರಿಸಿದರು. ಆದರೆ ಬಳಿಕ ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ಈ ಚರ್ಚೆಗೆ ಅವಕಾಶ ನೀಡಲು ಸಾಧ್ಯವಿಲ್ಲ, ಸದನದ ಸದಸ್ಯರ ಹೆಸರು ನೋಟೀಸ್‌ನಲ್ಲಿರುವುದರಿಂದ, ಅವರಿಗೆ ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವರಿಗೆ ಮಾಹಿತಿ ನೀಡಬೇಕು. ಬಳಿಕವೇ ಚರ್ಚೆಗೆ ಅವಕಾಶ ನೀಡಬೇಕು ಎಂದು ವಾದಿಸಿದರು.

ಈ ವಿಷಯವನ್ನು ಪ್ರತಿಪಕ್ಷದ ಪರವಾಗಿ ಮಾಜಿ ಸಚಿವ ಕೃಷ್ಣಬೈರೇಗೌಡ ಅವರಿಗೆ ಕಾಗೇರಿ ಮಾಹಿತಿ ರವಾನಿಸಿದರು. ಇದರಿಂದ ಆಕ್ರೋಶಗೊಂಡ ಕಾಂಗ್ರೆಸ್ ನಾಯಕರು ಧರಣಿ ನಡೆಸುವುದಾಗಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಇದಾಗುತ್ತಿದ್ದಂತೆ ಸ್ಪೀಕರ್ ಕಚೇರಿಯಲ್ಲಿ ನಾಲ್ಕು ಬಾರಿ ಸಂಧಾನ ಸಭೆ ನಡೆದರೂ, ಇದ್ಯಾವುದಕ್ಕೂ ಕಾಂಗ್ರೆಸ್ ನಾಯಕರು ಜಗ್ಗದೇ ತಮ್ಮ ಧರಣಿಯನ್ನು ಮುಂದುವರಿಸಿದರು.



### ಏಕಾಂಗಿಯಾಗಿ ಕುಳಿತ ಸಿಎಂ

ಇನ್ನು ವಿಧಾನಸಭೆ ನಿಗದಿಯಂತೆ 11 ಗಂಟೆಗೆ ಆರಂಭವಾಗಬೇಕಿತ್ತು. ಆದರೆ ಆಡಳಿತ-ಪ್ರತಿಪಕ್ಷದ ನಡುವಿನ ವಿವಾದಕ್ಕೆ ಸಾಲು ಸಾಲು ಸಂಧಾನ ಸಭೆಗಳು ನಡೆದಿದ್ದರಿಂದ, ವಿಧಾನಸಭೆ ಆರಂಭವಾಗುವುದು ಸುಮಾರು ಮೂರು ಗಂಟೆ ತಡವಾಯಿತು. ಆದರೆ ನಿಗದಿತ ಸಮಯಕ್ಕೆ ವಿಧಾನಸಭೆಗೆ ಆಗಮಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಕೆಲಹೊತ್ತು ಶಾಸಕರು, ಸಚಿವರು ಆಗಮಿಸಿ ಮಾತನಾಡಿದರು. ಬಳಿಕ ಏಕಾಂಗಿಯಾಗಿಯೇ ಕುಳಿತುಕೊಂಡ ಯಡಿಯೂರಪ್ಪ ಅವರು ಯಾರೊಂದಿಗೂ ಹೆಚ್ಚು ಚರ್ಚಿಸಲಿಲ್ಲ. ಬದಲಿಗೆ ಕೆಲ ನೋಟ್‌ಗಳನ್ನು ಮಾಡಿಕೊಳ್ಳುತ್ತಿದ್ದರು.

### ಸ್ಪೀಕರ್ ವಿರುದ್ಧ ವಾಗ್ದಾಳಿ

ನೋಟೀಸ್ ನೀಡಿದರೂ ಚರ್ಚೆಗೆ ಅವಕಾಶ ನೀಡದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ವಿರುದ್ಧ ಪ್ರತಿಪಕ್ಷ ನಾಯಕರು ವಾಗ್ದಾಳಿ ನಡೆಸಿದರು. ಕಾಗೇರಿ ಅವರು ಬಿಜೆಪಿಗೆ ಲಾಭವಾಗುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ರೀತಿಯ ವರ್ತನೆಯನ್ನು ಸಭಾಧ್ಯಕ್ಷರ ಪೀಠದಿಂದ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಇನ್ನು ಚರ್ಚೆಗೆ ಅವಕಾಶ ನೀಡುವುದಾಗಿ ಹೇಳಿ, ಬಳಿಕ ಸರಕಾರದ ಅಣತಿಯಂತೆ ಚರ್ಚೆಗೆ ಅವಕಾಶ ನೀಡದಿರುವುದು ಕೆಟ್ಟ ಸಂಪ್ರದಾಯ ಎಂದು ವಾಗ್ದಾಳಿ ನಡೆಸಿದರು.

ಪ್ರತಿಷ್ಠೆ ಬಿಟ್ಟು ಕಾಂಗ್ರೆಸ್ ಅಧಿವೇಶನ ನಡೆಸಲು ಸಂಪೂರ್ಣ ಸಹಕಾರ ನೀಡಬೇಕು. ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಅಧಿವೇಶನದಲ್ಲಿ ಸಂವಿಧಾನದ ಬಗ್ಗೆ ಚರ್ಚೆಯಾಗುತ್ತಿದೆ. ಸಿದ್ದರಾಮಯ್ಯ ಅವರು ಪ್ರಸ್ತಾಪಿಸಬೇಕೆಂದಿರುವ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಲಿ ನಮ್ಮದೇನು ಅಭ್ಯಂತರವಿಲ್ಲ. ಈ ವಿಚಾರದಲ್ಲಿ ಸಭಾಧ್ಯಕ್ಷರಿಗೆ ನಾನೂ ಕೂಡ ಮನವಿ ಮಾಡುತ್ತೇನೆ.

**- ಯಡಿಯೂರಪ್ಪ**, ಮುಖ್ಯಮಂತ್ರಿ